**ಸಾಕ್ಷಿಯನ್ನು ದಿನಾಂಕಃ 27.02.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ. ಕೆ.ಎಸ್.ಎಂ. ವಕೀಲರಿಂದಃ**

ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡವನ್ನು ಓದಲು ಮತ್ತು ಬರೆಯಲು ಬರುತ್ತದೆ. ನಾನು ಸಲ್ಲಿಸಿರುವ ಅರ್ಜಿಯ ಅಂಶಗಳನ್ನು ಓದಿ ತಿಳಿದುಕೊಂಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ನಾನು ಎದುರುದಾರರನ್ನು ಮದುವೆಯಾಗಿ ಈ ದಿವಸಕ್ಕೆ 14 ವರ್ಷವಾಗಿರುತ್ತದೆ. ನನ್ನ ತಾಯಿಯ ಮನೆ ಶಿರಮಳ್ಳಿಯಾಗಿರುತ್ತದೆ. ನಾನು ಮದುವೆಯಾದ ನಂತರ ಎದುರುದಾರರ ಗ್ರಾಮವಾದ ಮೊಳೆಯೂರಿನಲ್ಲಿ ವಾಸವಿದ್ದೆ ಎಂದರೆ ಸರಿ. ನಾನು ಮೊಳೆಯೂರಿನಲ್ಲಿ 04 ವರ್ಷಗಳ ಕಾಲ ವಾಸವಿದ್ದೆ. ಸದರಿ 04 ವರ್ಷಗಳ ಕಾಲ ಎದುರುದಾರರು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು. ನಂತರ ಮಕ್ಕಳ ವಿದ್ಯಾಭ್ಯಾಸ ಮಾಡಿಸಲು ಹೆಚ್.ಡಿ. ಕೋಟೆ ಪಟ್ಟಣದಲ್ಲಿ ಬಾಡಿಗೆ ಮನೆ ಮಾಡಿಕೊಂಡು ವಾಸವಿದ್ದೆವು ಎಂದರೆ ಸರಿ. ಸದರಿ ಬಾಡಿಗೆ ಮನೆಗೆ ಪಾವತಿಸಬೇಕಾದ ಮುಂಗಡ ಹಣ ಮತ್ತು ಬಾಡಿಗೆ ಹಣವನ್ನು ಎದುರುದಾರರೇ ಕೊಟ್ಟಿದ್ದರು ಎಂದರೆ ಸರಿಯಲ್ಲ. ನನ್ನ ಅರ್ಜಿಯಲ್ಲಿ ನನ್ನ ತಂದೆಯ ಮನೆಯವರು ತುಂಬಾ ಬಡವರು ಎಂದು ಬರೆಸಿರುತ್ತೇನೆಂದರೆ ಸರಿ. ನನ್ನ ತಂದೆ ಮೃತಪಟ್ಟಿರುತ್ತಾರೆ. ನನಗೆ ತಾಯಿ ಇರುತ್ತಾರೆ. ಶಿರಮಳ್ಳಿ ಗ್ರಾಮದಲ್ಲಿ ನನ್ನ ತಾಯಿಗೆ ಸ್ವಂತ ಮನೆ ಇರುವುದಿಲ್ಲ ಎಂದರೆ ಸರಿ. ನನ್ನ ತಾಯಿಯ ಮನೆಯವರು ಬಡವರಾಗಿರುವುದರಿಂದ ನನ್ನನ್ನು ನೋಡಿಕೊಳ್ಳಲು ಆಗುತ್ತಿಲ್ಲವೆಂದರೆ ಸರಿ.

ಹೆಚ್.ಡಿ. ಕೋಟೆಯಲ್ಲಿ ಬಾಡಿಗೆ ಮನೆಯಲ್ಲಿದ್ದಾಗ ಎದುರುದಾರರೇ ಸಾಲ ಮಾಡಿ ಬಾಡಿಗೆ ಹಣ ಪಾವತಿಸುತ್ತಿದ್ದರು ಎಂದರೆ ನಾನೇ ಸಾಲ ಮಾಡಿ ಕಟ್ಟುತ್ತಿದ್ದೆ. ಹೆಚ್.ಡಿ. ಕೋಟೆ ಪಟ್ಟಣದಲ್ಲಿ ನಾವು 10 ವರ್ಷಗಳ ಕಾಲ ಬಾಡಿಗೆ ಮನೆಯಲ್ಲಿದ್ದು, ಎಲ್ಲಾ ಬಾಡಿಗೆಯನ್ನು ಎದುರುದಾರರೇ ಪಾವತಿಸಿರುತ್ತಾರೆಂದರೆ ಸರಿ. ಅದೇ ರೀತಿ ಮಕ್ಕಳ ಶಾಲಾ ಶುಲ್ಕವನ್ನು ಸಹ ಎದುರುದಾರರೇ ಪಾವತಿಸುತ್ತಿದ್ದರು ಎಂದರೆ ಸರಿಯಲ್ಲ. ವಿಶ್ವನಾಥ ಕಾಲೋನಿಯಲ್ಲಿರುವ ಮಂಜುನಾಥರವರ ಮನೆಯನ್ನು ಭೋಗ್ಯಕ್ಕೆ ಪಡೆದು, ನನ್ನ ಹೆಸರಿಗೆ ಭೋಗ್ಯ ಪತ್ರ ಮಾಡಿಸಿ, ಎದುರುದಾರರೇ ರೂ. 1,75,000/- ಹಣವನ್ನು ಭದ್ರತೆಯಾಗಿ ಮಂಜುನಾಥರವರಿಗೆ ಪಾವತಿಸಿದ್ದರು ಎಂದರೆ ಸದರಿ ಹಣವನ್ನು ನಾನೇ ಪಾವತಿಸಿರುತ್ತೇನೆ. ಸದರಿ ಮನೆಯನ್ನು ಖಾಲಿ ಮಾಡುವ ಸಮಯದಲ್ಲಿ ಸದರಿ ಹಣವನ್ನು ನಾನೇ ಪಡೆದುಕೊಂಡಿರುತ್ತೇನೆಂದರೆ ಸರಿಯಲ್ಲ.

ದಿನಾಂಕಃ 02.12.2019 ರಂದು ಎದುರುದಾರರು ಹೆಚ್.ಡಿ. ಕೋಟೆ ಪಟ್ಟಣದಲ್ಲಿ ನನ್ನ ಹೆಸರಿಗೆ 01 ನಿವೇಶನವನ್ನು ಖರೀದಿಸಿ ಕೊಟ್ಟಿರುತ್ತಾರೆಂದರೆ ನನ್ನ ತಾಯಿ ಮನೆಯವರು ನನಗೆ ಕೊಡಿಸಿರುತ್ತಾರೆ. ಸದರಿ ಕ್ರಯದ ಸಂಪೂರ್ಣ ಹಣವನ್ನು ಎದುರುದಾರರೇ ಪಾವತಿಸಿದ್ದು, ನನ್ನ ಹೆಸರಿಗೆ ನೋಂದಣಿ ಮಾಡಿಸಿರುತ್ತಾರೆಂದರೆ ಸರಿಯಲ್ಲ. ನಾನು ಮತ್ತು ಎದುರುದಾರರು ಒಟ್ಟಿಗೆ ಸಂಸಾರ ನಡೆಸುವ ಸಮಯದಲ್ಲಿ ನನ್ನ ಹೆಸರಿಗೆ ನಿವೇಶನವನ್ನು ನೋಂದಣಿ ಮಾಡಿಸಿದ್ದರು ಸಹ ನನ್ನ ತಾಯಿ ಮನೆಯವರು ಕೊಡಿಸಿರುತ್ತಾರೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿಯ ಮನೆ ಕಡೆಯವರು ಬಡವರಾಗಿರುವುದರಿಂದ ನನ್ನ ಹೆಸರಿಗೆ ನಿವೇಶನವನ್ನು ಕೊಡಿಸುವಷ್ಟು ಆರ್ಥಿಕ ಸಾಮರ್ಥ್ಯವಿರಲಿಲ್ಲ ಎಂದರೆ ಆ ಸಮಯದಲ್ಲಿ ನನ್ನ ತಾಯಿಯ ಮನೆಯವರು

ಜಮೀನನ್ನು ಮಾರಾಟ ಮಾಡಿರುತ್ತಾರೆ. ನನ್ನ ತಾಯಿಯ ಮನೆಯವರು ಜಮೀನನ್ನು ಮಾರಾಟ ಮಾಡಿದ ದಾಖಲೆಯನ್ನು ಹಾಜರುಪಡಿಸಲು ನನಗೇನು ತೊಂದರೆ ಇಲ್ಲ. ನನ್ನ ತಾಯಿಯ ಮನೆಯ ಕಡೆಯವರು ಯಾವುದೇ ಜಮೀನನ್ನು ಮಾರಾಟ ಮಾಡದಿದ್ದರು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ನನ್ನ ಗಂಡ ಕೂಲಿ ಕೆಲಸ ಮಾಡುತ್ತಾರೆಂದರೆ ಕೆಲಸಗಾರರನ್ನು ಕರೆದುಕೊಂಡು ಹೋಗಿ ಗಾರೆ ಕೆಲಸ ಮಾಡಿಸುತ್ತಾರೆ. ಆ ರೀತಿ ಕೆಲಸಗಾರರನ್ನು ಕರೆದುಕೊಂಡು ಹೋಗಿ ಕೆಲಸ ಮಾಡುವುದನ್ನು ನೋಡಿರುತ್ತೀರಾ ಎಂದರೆ ಕಡೂರಿನಲ್ಲಿ ಕೆಲಸ ಮಾಡುವುದನ್ನು ನಾನು ನೋಡಿರುತ್ತೇನೆ ಆದರೆ ಇತ್ತೀಚೆಗೆ ನಾನು ನೋಡಿರುವುದಿಲ್ಲ. ಎದುರುದಾರರೇ ಸ್ವತಃ ಗಾರೆ ಕೆಲಸ ಮಾಡುತ್ತಾರೆಂದರೆ ಕೆಲಸಗಾರರನ್ನು ಕರೆದುಕೊಂಡು ಹೋಗಿ ಅವರ ಮೂಲಕ ಕೆಲಸ ಮಾಡಿಸುತ್ತಾರೆ.

ನಾನು ಈ ಅರ್ಜಿ ಸಲ್ಲಿಸುವವರೆಗು ಎದುರುದಾರರ ಜೊತೆ ಜೀವನ ನಡೆಸುತ್ತಿದ್ದೆ ಎಂದರೆ ಸರಿ. ಎದುರುದಾರರು ಈಗಲೂ ಕೂಡ ಬಾಡಿಗೆ ಮನೆ ಮಾಡಿ ನನ್ನನ್ನು ಚೆನ್ನಾಗಿ ನೋಡಿಕೊಳ್ಳಲು ಸಿದ್ಧರಿರುತ್ತಾರೆಂದರೆ ಈ ಹಿಂದೆಯೂ ಕೂಡ ನನ್ನನ್ನು ಚೆನ್ನಾಗಿ ನೋಡಿಕೊಂಡಿಲ್ಲ. ಎದುರುದಾರರಿಗೆ ಯಾವುದೇ ರೀತಿಯಲ್ಲು ಮಧ್ಯಪಾನ ಮಾಡುವ ಅಭ್ಯಾಸವಿರುವುದಿಲ್ಲ ಎಂದರೆ ಸರಿಯಲ್ಲ. ಎದುರುದಾರರು ವೈದ್ಯಕೀಯ ಪರೀಕ್ಷೆಗೆ ಒಳಪಡಸಲು ಸಿದ್ದರಿರುತ್ತಾರೆಂದರೆ ನನಗೆ ತೊಂದರೆ ಕೊಡುವ ಸಮಯದಲ್ಲಿ ಮಧ್ಯಪಾನ ಮಾಡಿಕೊಂಡು ಬಂದು ತೊಂದರೆ ಕೊಟ್ಟಿರುತ್ತಾರೆ. ಎದುರುದಾರರು ನನಗೆ ಯಾವುದೇ ರೀತಿ ಮಾನಸಿಕವಾಗಿಯಾಗಲೀ ಅಥವಾ ದೈಹಿಕವಾಗಿಯಾಗಲೀ ಯಾವುದೇ ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಭೋಗ್ಯದ ಹಣವನ್ನು ನಾನೇ ಪಡೆದುಕೊಂಡು

ದುರುಪಯೋಗಪಡಿಸಿಕೊಂಡಿರುತ್ತೇನೆಂದರೆ ಸರಿಯಲ್ಲ. ಎದುರುದಾರರು ನನ್ನ ಹೆಸರಿಗೆ ನೋಂದಣಿ ಮಾಡಿಸಿರುವ ನಿವೇಶನವನ್ನು ಮಾರಾಟ ಮಾಡಲು ಪ್ರಯತ್ನಿಸಿರುತ್ತೇನೆಂದರೆ ನನ್ನ ಬಳಿ ಯಾವುದೇ ಪತ್ರಗಳು ಇಲ್ಲದಿರುವುದರಿಂದ ನಾನು ಮಾರಾಟ ಮಾಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ನನ್ನ ಬಳಿ ರೂ. 20,000/- ಬೆಲೆಯ ಟಚ್ ಸ್ಕ್ರೀನ್ ಮೊಬೈಲ್ ಇರುತ್ತದೆ. ನನ್ನ ಮೊಬೈಲ್ ನಂಬರ್ 8431560353 ಮತ್ತು 7349030850 ಆಗಿರುತ್ತವೆ. ಈ ಎರಡೂ ನಂಬರ್ ಗಳನ್ನು ನಾನು ಉಪಯೋಗಿಸುತ್ತಿದ್ದೇನೆ. ಆನಗಟ್ಟಿಯ ಗಣೇಶ್ ಯಾರೆಂದು ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಮಾನ್ಯ ಎದುರುದಾರರ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**